ಸಂಗ್ರಹ : ಸುನಯನ ವಾಲ್ಟರ್ಸ್

# ಒಂದು ಲೋಟ ಹಾಲು



ತನ್ನ ಶಾಲಾ ಶುಲ್ಕದ ವೆಚ್ಚವನ್ನು ಭರಿಸಲು ಮನೆಮನೆಗೆ ಹಾಲು ವಿತರಣೆ ಮಾಡುತ್ತಿದ್ದ ಚಿಕ್ಕ ಹುಡುಗನಿಗೆ ತುಂಬಾ ಹಸಿವೆಯಾಗಿತ್ತು. ಅವನ ಬಳಿ ಹಣವಿರದೇ ಇದ್ದುದರಿಂದ, ಮುಂದಿನ ಮನೆಯಲ್ಲಿ ಯಾಚಿಸುವ ನಿರ್ಧಾರ ಮಾಡಿದನು. ಸುಂದರಿಯಾದ ಹುಡುಗಿಯೊಬ್ಬಳು ಬಾಗಿಲು ತೆರೆದಾಗ ಅವನಿಗೆ ಸಂಕೋಚವಾಯಿತು.

ಮನಸ್ಸು ಬದಲಾಯಿಸಿದ ಅವನು ಕೇಳಿದನು – "ನನಗೆ ಕುಡಿಯಲು ನೀರು ಕೊಡುವಿರಾ?" ಹುಡುಗಿಯು ಅವನು ಹಸಿದುದನ್ನು ಕಂಡುಕೊಂಡದ್ದರಿಂದ ಒಂದು ದೊಡ್ಡ ಲೋಟ ತುಂಬಾ ಹಾಲು ತಂದು ಅವನಿಗೆ ನೀಡಿದಳು. ನಿಧಾನವಾಗಿ ಅದನ್ನು ಕುಡಿದ ಹುಡುಗನು ಪ್ರಶ್ನಿಸಿದನು – "ಇದಕ್ಕೆ ನಾನು ಎಷ್ಟು ಹಣ ಕೊಡಬೇಕಾಗಿದೆ?"

"ನೀನೇನೂ ಕೊಡಬೇಕಾಗಿಲ್ಲ" ಹುಡುಗಿ ಹೇಳಿದಳು – "ದಯೆಯ ಬೆಲೆ ಕಟ್ಟಬಾರದೆಂದು ನಮ್ಮ ತಾಯಿ ತಿಳಿಸಿದ್ದಾಳೆ."


ಹೃದಯಪೂರ್ವಕವಾದ ಕೃತಜ್ಞತೆಯನ್ನರ್ಪಿಸಿ ಹುಡುಗನು ಅಲ್ಲಿಂದ ಹೊರಟು ಹೋದನು.

ಹೋವರ್ಡ್ ಕೆಲ್ಲಿಯು ಆ ಕ್ಷಣದಲ್ಲಿ ದೈಹಿಕ ಬಲವನ್ನು ಪಡೆದುದಷ್ಟೇ ಅಲ್ಲ, ದೇವರಲ್ಲಿ ಆತನ ನಂಬಿಕೆಯೂ ಬಲವಾಗಿತ್ತು. ಬಹಳ ದಿನಗಳ ನಂತರ, ತೀವ್ರ ಅಸ್ವಸ್ಥತೆಗೊಳಗಾದ ಅದೇ ಯುವತಿಯು ಆ ಸಣ್ಣ ಊರಿನಿಂದ ವೈದ್ಯೋಪಚಾರಕ್ಕಾಗಿ ದೊಡ್ಡ ಪಟ್ಟಣಕ್ಕೆ ಒಯ್ಯಲ್ಪಟ್ಟಳು. ಅವಳ ಅಪರೂಪದ ಅಸ್ವಸ್ಥತೆಯ ಕುರಿತು ಅಧ್ಯಯನ ನಡೆಸಲಾಯಿತು. ಬಹಳ ದೊಡ್ಡ ವೈದ್ಯರಾದ ಡಾ। ಹೋವರ್ಡ್ ಕೆಲ್ಲಿಯವರಿಗೆ ಕರೆ ಹೋಯಿತು. ಆ ಯುವತಿಯ ಊರಿನ ಹೆಸರು ಕೇಳಿದ ಡಾ॥ ಕೆಲ್ಲಿಯವರ ಕಣ್ಣುಗಳು ಭಾವುಕವಾದುವು. ವೈದ್ಯರ ದಿರಿಸು ಧರಿಸಿದ ಅವರು ಅವಳ ಭೇಟಿಗಾಗಿ ಹೋದಾಗ, ಕೂಡಲೇ ಅವಳನ್ನು ಗುರುತಿಸಿದರು. ಅವಳ ಆರೈಕೆಯಲ್ಲಿ ತೀವ್ರ ಆಸಕ್ತಿ ವಹಿಸಿದ ವೈದ್ಯರು ಕೊನೆಗೂ ಸಫಲತೆ ಪಡೆದರು. ಆಸ್ಪತ್ರೆಯ ದೊಡ್ಡ ಮೊತ್ತದ ಬಿಲ್ ತಯಾರಾಯಿತು. ಡಾ॥ ಹೋವರ್ಡ್ ಕೆಲ್ಲಿಯವರು ಸಹಿ ಮಾಡಿ ಅದರ ಮೇಲೆ ಏನೋ ಬರೆದರು. ಬಿಲ್ ಆಕೆಗೆ ತಲುಪಿದಾಗ ಅದನ್ನು ತೆರೆದು ನೋಡಲು ಅವಳು ಭಯಗೊಂಡಿದ್ದಳು. ಅದನ್ನು ಭರಿಸಲು ತನ್ನ ಉಳಿದ ಜೀವಮಾನವೆಲ್ಲ ತಾನು ದುಡಿಯಬೇಕಾಗಬಹುದೆಂದು ಅವಳ ಯೋಚನೆಯಾಗಿತ್ತು. ಮೆಲ್ಲನೆ ತೆರೆದು ನೋಡಿದಾಗ.... ಕೊನೆಯಲ್ಲಿದ್ದ ಬರಹವೊಂದು ಅವಳ ಕಣ್ಸೆಳೆಯಿತು.

"ಒಂದು ಲೋಟ ಹಾಲಿನಿಂದ ಈ ಬಿಲ್ ಚುಕ್ತವಾಗಿದೆ" ಸಹಿ : ಡಾ। ಹೋವರ್ಡ್ ಕೆಲ್ಲಿ

ಸಂತಸದ ಕಣ್ಣೀರು ಆಕೆಯ ಕಣ್ಣುಗಳಿಂದ ಹರಿಯಿತು. ಅವಳ ಹೃದಯ ಪ್ರಾರ್ಥಿಸಿತು – "ದೇವರೇ ನಿನಗೆ ಅನಂತಾನಂತ ಕೃತಜ್ಞತೆಗಳು. ನಿನ್ನ ಪ್ರೀತಿಯು ಕೈಗಳಿಂದ ಕೈಗೆ, ಹೃದಯದಿಂದ ಹೃದಯಕ್ಕೆ ಹಬ್ಬುವಂತಾದುದಕ್ಕೆ ನಿನಗೆ ಸ್ತೋತ್ರ."

ನೀವು ಈ ಹೊತ್ತು ಮಾಡಿದ ಒಳ್ಳೇ ಕಾರ್ಯವು ನಿಮಗೆ ಅಥವಾ ನೀವು ಪ್ರೀತಿಸಿದವರಿಗೆ ಖಂಡಿತವಾಗಿ ಬೇಗನೇ ಫಲ ಕೊಡುತ್ತದೆ. ನಿಮಗೆ ಅದು ಕಂಡುಬಾರದೇ ಹೋದರೂ – ಜಗತ್ತಿನಲ್ಲಿ ಒಳ್ಳೆಯತನವು ಹಬ್ಬುವಂತೆ ಮಾಡಿದ ಧನ್ಯತೆಯು ನಿಮಗಿರುವುದು. ನಮಗೆ ಬೇಕಾಗಿರುವುದೂ ಇದೇ ಅಲ್ಲವೇ? ■




# ಸಾರ್ವಜನಿಕ ಹಿತಾಸಕ್ತಿ

ಎಸ್.ಟಿ. ನಿಲ್ದಾಣದ ಬಳಿ ಬಸ್ಸನ್ನು ಹತ್ತಲು ಇಬ್ಬರು ವಿದ್ಯಾರ್ಥಿಗಳು ಅದರ ಹಿಂದೆ ಓಡುತ್ತಿದ್ದರು. ಅದರಲ್ಲಿ ಒಬ್ಬನು ಒಂದು ಬಸ್ಸನ್ನು ದಾಟಿ ಓಡುತ್ತಿದ್ದಾಗ ಬೆನ್ನ ಮೇಲೆ ಏನೋ ಬಿದ್ದಂತಾಯಿತು. "ಒಬ್ಬ ಪ್ರಯಾಣಿಕ ನಿನ್ನ ಬೆನ್ನಿಗೆ ಉಗುಳಿದನು" ಎಂದು ಎರಡನೇ ವಿದ್ಯಾರ್ಥಿಯು ಹೇಳಿದನು. ತನ್ನ ಕಾರ್ಯಕ್ಕೆ ವಿಷಾದ ವ್ಯಕ್ತಪಡಿಸಿ ಆ ವ್ಯಕ್ತಿಯು ಸಮಾಧಾನದಿಂದ ಕುಳಿತಿದ್ದನು! ಈ ಇಬ್ಬರು ವಿದ್ಯಾರ್ಥಿಗಳು ಬಸ್ಸಿನ ಒಳಹೊಕ್ಕು ಆ ವ್ಯಕ್ತಿಯನ್ನು ಹೊರಗೆಳೆದು ಉಗುಳಿದ ಬಟ್ಟೆಯನ್ನು ಸ್ವಚ್ಛಗೊಳಿಸುವಂತೆ ಹೇಳಿ ಕೂಗಾಡಿದರು. ಅಲ್ಲಿ ಗದ್ದಲ ಮತ್ತು ಗೊಂದಲದ ಪರಿಸ್ಥಿತಿ ಉಂಟಾಯಿತು!

**ಸೂಚನೆಗಳು :**

ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಚೆಲ್ಲುವುದು ಅಥವಾ ಉಗುಳುವುದು ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆ ಇರುವ ಕೆಟ್ಟ ಅಭ್ಯಾಸವಾಗಿದೆ! ಹಾಗೆ ಮಾಡುವುದು ಅನಾರೋಗ್ಯಕರವಾದ ಪದ್ಧತಿಯಾಗಿದೆ! ಇದು ಸಾರ್ವಜನಿಕರಿಗೆ ತೊಂದರೆ ಮತ್ತು ಮುಜುಗರವನ್ನುಂಟು ಮಾಡುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ನಿಷಿದ್ಧವಾಗಿದೆ ಹಾಗೂ ಅಂತಹವನಿಗೆ ದಂಡ ವಿಧಿಸಲಾಗುತ್ತದೆ. ಆದರೆ ನಮ್ಮಲ್ಲಿ ಅಂತಹ ನಿಷೇಧ ಇಲ್ಲ!

**ನೀತಿ :**

ಸಾರ್ವಜನಿಕ ಸ್ಥಳಗಳನ್ನು ಮಲಿನಗೊಳಿಸುವುದು ಅನಾರೋಗ್ಯಕರವಾಗಿದೆ ಮತ್ತು ಅಸಂಸ್ಕೃತಿಯಾಗಿದೆ.

**ಚಿಂತನೆಗಳು:**

ಸಿಕ್ಕ ಸಿಕ್ಕ ಸ್ಥಳಗಳಲ್ಲಿ ಕಸಕಡ್ಡಿಗಳನ್ನು ಚೆಲ್ಲುವುದು ಅಥವಾ ಎಲ್ಲಿಯಾದರೂ ಉಗುಳುವುದರಿಂದ ಜನರು ನಿಮ್ಮನ್ನು ತಿರಸ್ಕಾರ ಭಾವದಿಂದ ನೋಡುತ್ತಾರೆ. ಆದುದರಿಂದ ನೀವು ಆ ಬಗ್ಗೆ ಎಚ್ಚರಿಕೆಯಿಂದ ಇದ್ದು ಈ ಕೆಟ್ಟ ಅಭ್ಯಾಸದಿಂದ ಹೊರಬರಬೇಕು.

**ಪ್ರಾರ್ಥನೆ:**

ಸಾರ್ವಜನಿಕ ಸ್ಥಳಗಳಲ್ಲಿ ಯೋಗ್ಯ ರೀತಿಯಲ್ಲಿ ನಡೆದುಕೊಳ್ಳುವಂತೆ ಸಹಾಯಿಸು. ಓ ದೇವಾ! ಕಂಡ ಕಂಡಲ್ಲಿ ಉಗುಳುವ ಮತ್ತು ಅಂತಹ ಇತರ ಕೆಟ್ಟ ಅಭ್ಯಾಸಗಳಿಂದ ಬಿಡುಗಡೆಯಾಗುವಂತೆ ಸಹಾಯಿಸು. ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿ ಇಡುವ ಕಾಳಜಿಯನ್ನು ಒದಗಿಸು. ಈ ಸಭ್ಯತೆಯ ಮನೋಭಾವನೆಯನ್ನು ನಿನ್ನಲ್ಲಿ ವಿನೀತತೆಯಿಂದ ಬೇಡುತ್ತೇನೆ....... ಆಮೆನ್.

## 12ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಪ್ರವ್ಯ, ಮುಲ್ಕಿ
ಸೆಪ್ಟೆಂಬರ್ 10

**-: ಶುಭಕೋರುವವರು :-**

ಪ್ರೀತಿಯ ರೀಟ ಆಂಟಿ, ಸಂತೋಷ್ ಅಂಕಲ್, ಸ್ನೇಹಲಕ್ಕ ಮತ್ತು ಏಂಜಲಕ್ಕ